# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 22 / 2022

ಸಿಡಬ್ಲ್ಯೂ ಃ 2
ಪಿಡಬ್ಲ್ಯೂ ಃ 2

ದಿನಾಂಕಃ **13-11-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ಭೀಮರಾಯ |
| ತಂದೆ ಹೆಸರು | - | ಸಾಬಣ್ಣ |
| ವಯಸ್ಸು | - | **48** ವರ್ಷ |
| ಉದ್ಯೋಗ | - | ಒಕ್ಕಲುತನ |
| ವಾಸಸ್ಥಳಃ | - | ಆರ್. ಹೊಸಳ್ಳಿ |

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ಚಾಸಾ-**3** ರವರ ಪರಿಚಯ ನನಗೆ ಇರುತ್ತದೆ. ಕಳೆದ ಮೂರು ವರ್ಷಗಳ ಹಿಂದೆ ಹಣಮಂತ ದೇವರ ಗುಡಿಗೆ ಹೋಗಿದ್ದೆ ಅಲ್ಲಿ ಪೋಲಿಸರು ಬಂದು ನನಗೆ ಸಹಿ ಮಾಡು ಎಂದು ಹೇಳಿದ್ದರು ಆದ್ದರಿಂದ ನಾನು ಸಹಿ ಮಾಡಿದ್ದೆ. ಯಾವ ಕಾರಣಕಾಗಿ ಪೋಲಿಸರು ನನ್ನ ಸಹಿಯನ್ನು ಪಡೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸ್ಥಳದಲ್ಲಿ ಪೋಲಿಸರು ಫೋಟೊವನ್ನು ತೆಗೆದಿದ್ದರು. ಯಾವ ಕಾರಣಕ್ಕಾಗಿ ಫೋಟೊವನ್ನು ತೆಗೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು ಚಾಸಾ-**3** ರವರ ಸಮಕ್ಷಮ ಪೋಲಿಸರು ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಗುನ್ನೆ ಸಳದ ಪಂಚನಾಮೆ ಆಗಿರುತದೆ. ಅದನ್ನು ನಿಪಿ-**4** ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-**4** ಎ ಎಂದು ಗುರುತಿಸಲಾಯಿತು. ಸಾಕ್ಷಿಯು **2** ಫೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದಿನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಅವುಗಳನ್ನು ನಿಪಿ-**5** ಮತ್ತು **6** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದಿರುವ ಕಾರಣ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.

ಪಾಟೀ ಸವಾಲು ಸ.ಸ.ಅ. ರವರಿಂದಃ

ದಿನಾಂಕ 16.10.2021 ರಂದು ಮದ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯವರೆಗೆ ಆರ್ ಹೊಸಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಬಾಲ್ಯ ವಿವಾಹ ಆದ ಬಗ್ಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ನಿಪಿ-4 ರಂತೆ ಗುನ್ಹೆಸ್ಥಳದ ಪಂಚನಾಮೆಯನ್ನು ಮಾಡಿ ನಿಪಿ-5 ಮತ್ತು 6 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ನಿಪಿ-4 ರಂತೆ ಗುನ್ಹೆಸ್ಥಳದ ಪಂಚನಾಮೆಯನ್ನು ಮಾಡಿದದರು ಸಹಾ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಾದ ಃಶ್ರೀ. ಆರ್.ಕೆ. ರವರಿಂದಃ</u>

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.